

ಎಡದಿಂದ ಬಲಕ್ಕೆ
1. ವೀರ ಅಭಿಮನ್ಯುವೆಂದರೆ ಎಲ್ಲರಿಗೂ ಭಾರೀ ಹೆಮ್ಮೆ, ಗೌರವ 4
3. ಅದಾವುದೇ ದಿನವಿರಲಿ, ಒಟ್ಟು ಕಾಲಾಂತರ ಮಾತ್ರ ಒಂದೇ 3
4. ಒಳ್ಳೆಯದಾಗಲೆಂದು ಹರಸಲು ಈ ತಾಂಬೂಲ 3
6. ದೇಗುಲಕ್ಕೆ ಆಧಾರದ ಕಂಬದಂತಿದ್ದ ಆತ ದೇವರ ಅರ್ಚಕ 4
8. ಕೇಳಿದವರಿಗೆಲ್ಲ ಆತ ನೀಡುತ್ತಿದ್ದದ್ದು ಬರೀ ಕಪ್ಪು ಹಣ 4
10. ಶೌರ್ಯವಂತರನ್ನೂ ನಡುಗಿಸುವಂತೆ ಧುಮುಕುವ ನದಿ ಜೋಗದಲ್ಲಿ 4
12. ಆ ನಂತರ ಏನೇ ಆಗಲಿ, ಈಗಂತೂ ಬೇಕೇ ಬೇಕು ಬೆಣ್ಣೆ 4
16. ಸಾಂಬಾರಿನ ರುಚಿ ಇಷ್ಟು ಚೆನ್ನಾಗಿರುವುದು ಒಳ್ಳೆಯ ಅದೃಷ್ಟ ಅಷ್ಟೇ 3
17. ಮುಂಜಾನೆ ಬಂದೊಡನೆ ನೆನಪಾಗುತ್ತದೆ ಪವಿತ್ರ ನದಿ 3
18. ವಾರಿಜನಾಭನ ದರ್ಶನ ದೊರಕಿದ್ದು ವರ್ಷಾರಂಭದ ಮಾಸ 4

ಮೇಲಿನಿಂದ ಕೆಳಕ್ಕೆ
1. ಅಂಧಕಾರಕ್ಕೆ ಹೆದರುವವರೇ ಬಹಳ ಹೆಚ್ಚು 3
2. ನೋವನ್ನು ನಿವಾರಿಸುವ ಈ ಕ್ರಮ ಸಂಪೂರ್ಣ ಹೊಸದು 3
3. ಇಳಿಯಲು ಆಗದಂಥ ಭಾವಿ; ಎಷ್ಟು ಆಳ! 3
5. ಮಾಳಿಗೆಯ ಮೇಲೆ ನಿಂತಿರುವ ಅವಳಿ ಹೇಗಿದೆ ನೋಡಿ 3
6. ಆಶೆಯೆಂಬ ಹಗ್ಗವನ್ನು ಹಿಡಿದರೆ ಪ್ರಾಣವನ್ನೇ ತೆಗೆದೀತು! 4
7. ವ್ಯಾಕುಲಳಾಗಿದ್ದಾಳೇಕೆ, ಲಲಿತ ವಿದ್ಯಾ ಪರಿಣತೆ? 4
8. ಕಾರು ನಡೆಸಲು ಕಲಿಸುವವನೇ ಅಲ್ಲಿ ಗುಮಾಸ್ತ ಕೂಡ 4
9. ಅವನ ತಂದೆಯ ಬಾಯ್ತುಂಬ ಹೊಸ ಹಲ್ಲು 4
11. ವಿರೋಧವನ್ನೆಲ್ಲ ಎದುರಿಸಿ ಸಾಧಿಸಿದ ಬೆಳವಣಿಗೆ ಹೀಗೆ 3
13. ಪ್ರಾಣ ವಧೆ ಮಾಡಲು ಬಂದಿದ್ದವನ ಮುಖ ಗೊತ್ತೇ? 3
14. ಅಜುಬಾಜಿನ ಎಲ್ಲರ ಭುಜದ ಮೇಲೂ ಒಂದೊಂದು ತಾವರೆ! 3
15. ಈ ಖಂಜರಿ ಸಿಕ್ಕಿದ್ದು ಹಳೇ ಸಾಮಾನಿನ ಅಂಗಡಿಯಲ್ಲಿ ಹೌದೇ? 3

## 17–02– 2022 ಉತ್ತರಗಳು

ಎಡದಿಂದ ಬಲಕ್ಕೆ
1. ವಿರಹ 2. ಶಬರ 3. ಕುಹಕ 5. ರಿವಾಜು 6. ಭವನ 8. ರಮಣ 10. ವೀಕ್ಷಕ 12. ಮಥನ 13. ಹರವಿ 14. ಭುವನ

ಮೇಲಿನಿಂದ ಕೆಳಕ್ಕೆ
1. ವಿದೇಶ 3. ಕುವರ 4. ಬದರಿ 6. ಭಯಂಕರ 7. ಮುಜುಗರ 9. ನರವೀರ 11. ರಾಮಬಾಣ 15. ಕಡಾರ 16. ವರ್ಧನ 17. ವಿಪಿನ

ಪ್ರಶ್ನಾಂಕಣ

# ವೃಕ್ಷ ಪ್ರಭೇದ: ಎಷ್ಟು ವಿಧ?

ಧರೆಯ ವೃಕ್ಷ ಸಂಪತ್ತನ್ನು ಕುರಿತ ಅಭೂತಪೂರ್ವ ಅಧ್ಯಯನ ವರದಿಯೊಂದು ಅತ್ಯಂತ ಇತ್ತೀಚೆಗೆ ಪ್ರಕಟವಾಗಿದೆ. ಅಮೆರಿಕದ ಪ್ರತಿಷ್ಠಿತ ಸಂಸ್ಥೆ 'ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್'ನ ವಿಶ್ವಮಾನ್ಯ ಜರ್ನಲ್ PNAS ನಲ್ಲಿ ಆ ವರದಿ ಪ್ರಕಟಗೊಂಡಿದೆ. ಜಗತ್ತಿನ ಹಲವು ರಾಷ್ಟ್ರಗಳ ಒಟ್ಟು 150 ವಿಜ್ಞಾನಿಗಳು ಹಲವು ವರ್ಷಗಳ ಕಾಲ ನಡೆಸಿದ ಅಧ್ಯಯನದ ಕ್ರೋಢೀಕೃತ ವರದಿ ಅದು. 90 ದೇಶಗಳ, 38 ದಶಲಕ್ಷ ವೃಕ್ಷಗಳ ನೇರ ಅಧ್ಯಯನವನ್ನು ಬಳಸಿ, ಈವರೆಗಿನ ಹಿಂದಿನ ಎಲ್ಲ ವೈಜ್ಞಾನಿಕ ದಾಖಲೆಗಳನ್ನೂ ಸೇರಿಸಿ ಆ ವಿಜ್ಞಾನಿಗಳು ಅಂದಾಜಿಸಿರುವ ಪ್ರಕಾರ ಪ್ರಸ್ತುತ ಧರೆಯಲ್ಲಿರುವ 'ವೃಕ್ಷ ಪ್ರಭೇದ'ಗಳ (Tree Species) ಒಟ್ಟು ಸಂಖ್ಯೆ 73,300! ವಿಶೇಷ ಏನೆಂದರೆ, ಆ ಪೈಕಿ 64,100 ಪ್ರಭೇದಗಳು ಖಚಿತವಾಗಿ ಗುರುತಿಸಲ್ಪಟ್ಟಿವೆ; 9,200 ಪ್ರಭೇದಗಳು ಇನ್ನೂ ಪತ್ತೆಯಾಗಬೇಕಿವೆ.

ಪತ್ತೆಯಾಗಿಲ್ಲದ 9200 ಪ್ರಭೇದಗಳ ಮೂರರ ಒಂದಂಶ ಅತ್ಯಪರೂಪದ ಪ್ರಭೇದಗಳಾಗಿವೆ. ಅಂತಹದೇ ಪ್ರಭೇದಗಳ ಶೇ. 40 ರಷ್ಟು ಪ್ರಭೇದಗಳು ದಕ್ಷಿಣ ಅಮೆರಿಕ ಖಂಡದಲ್ಲಿವೆ. ಅತ್ಯಪರೂಪದ ಆದರೆ ಇನ್ನೂ ಪತ್ತೆಯಾಗಿಲ್ಲದ 1500 ಪ್ರಭೇದಗಳು ಓಷಿಯಾನಿಯಾ ಪ್ರದೇಶದ (ಆಸ್ಟ್ರೇಲೇಷಿಯಾ, ಮೆಲನೇಷಿಯಾ, ಮೈಕ್ರೊನೇಷಿಯಾ ಮತ್ತು ಪಾಲಿನೇಷಿಯಾಗಳನ್ನೊಳಗೊಂಡ ಪ್ರದೇಶ) ಉಷ್ಣವಲಯದ ಅಡವಿಗಳಲ್ಲಿವೆ.




ವಿಶ್ವವಿಖ್ಯಾತ 'ನೇಚರ್' ಪತ್ರಿಕೆಯ ವರದಿಯೊಂದರ ಪ್ರಕಾರ ಪ್ರಸ್ತುತ ಜಗತ್ತಿನಲ್ಲಿರುವ ಸಕಲ ವೃಕ್ಷಗಳ ಒಟ್ಟು ಸಂಖ್ಯೆ 3.04 ಟ್ರಿಲಿಯನ್ (1 ಟ್ರಿಲಿಯನ್= 1 ಲಕ್ಷ ಕೋಟಿ) ಹಾಗೆಂದರೆ ಜಗತ್ತಿನಲ್ಲಿ ಈಗ ಬದುಕಿರುವ ಪ್ರತಿಯೊಬ್ಬ ವ್ಯಕ್ತಿಗೂ ಸರಾಸರಿ 422 ವೃಕ್ಷಗಳಿವೆ ಎಂದಾಯಿತು! ನಮ್ಮ ಭಾರತದಲ್ಲಿನ ವೃಕ್ಷಗಳ ಒಟ್ಟು ಸಂಖ್ಯೆ 36 ಶತಕೋಟಿ. ಎಂದರೆ ನಮ್ಮ ದೇಶದ ಪ್ರತಿಯೊಬ್ಬರಿಗೂ 30 ವೃಕ್ಷಗಳಿವೆ!

ಪ್ರಪಂಚದಲ್ಲಿ 'ಕೊಡಲಿ ಹಿಡಿದ ಮನುಷ್ಯ' ಕಾಲಿಡುವ ಮೊದಲು ಇದ್ದದ್ದು ಸುಮಾರು 6 ಟ್ರಿಲಿಯನ್ ವೃಕ್ಷಗಳು! ಆ ಸಂಖ್ಯೆ ಈಗ ಅರ್ಧಕ್ಕೆ ಇಳಿದಿದೆ. ಪ್ರಸ್ತುತ ಪ್ರತಿವರ್ಷ ನಾಶಗೊಳ್ಳುತ್ತಿರುವ ವೃಕ್ಷಗಳ ಸಂಖ್ಯೆ 10 ಶತಕೋಟಿ. 2050ರ ವೇಳೆಗೆ ಧರೆಯ ಒಟ್ಟು ವೃಕ್ಷಗಳ ಸಂಖ್ಯೆ ಎರಡು ಟ್ರಿಲಿಯನ್‌ಗೆ ಇಳಿಯಲಿದೆ!

■ ಎನ್. ವಾಸುದೇವ್